**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಕ್ರಿಮಿಸ್ ನಂ. 86/2022**

ಪಿ.ಡಬ್ಲ್ಯು 1

ಸಾಕ್ಷಿದಾರರ ಹೆಸರು – ಗೀತಾ ಪಟಗಾರ
ಗಂಡನ ಹೆಸರು –ಗಣಪತಿ ಪಟಗಾರ
ವಯಸ್ಸು – 36 ವರ್ಷ
ಉದ್ಯೋಗ – ಮನೆಕೆಲಸ
ವಾಸ್ತವ್ಯ – ತಲಗೋಡ, ಊರಕೇರಿ, ಕುಮಟಾ

(ಇಂದು ದಿನಾಂಕಃ 10–08–2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಶ್ರೀಮತಿ ಎಂ.ಪಿ.ಎನ್. ವಕೀಲರಿಂದಃ**

ಎದ್ರುದಾರನು ನನ್ನ ಗಂಡ. ನನ್ನ ಮದುವೆ ಎದ್ರುದಾರನ ಜೊತೆ ದಿಃ 14–05–2007 ರಂದು ಶ್ರೀ ಮಹಾವಿಷ್ಣು ದೇವಸ್ಥಾನ ಕಲ್ಯಾಣ ಮಂಟಪ, ಉಂಚಗಿ, ಕುಮಟಾದಲ್ಲಿ ಗುರುಹಿರಿಯರ ಸಮಕ್ಷಮ ನಡೆದಿರುತ್ತದೆ. ನನ್ನ ಮತ್ತು ಎದ್ರುದಾರನ ವಿವಾಹದ ಫಲವಾಗಿ ಗೋಕುಲ ಎಂಬ ಮಗನು ದಿಃ 28–04–2009 ರಂದು ಜನಿಸಿರುತ್ತಾನೆ. ಮದುವೆಯಾಗಿ ಒಂದು ವರ್ಷಗಳ ಕಾಲ ಎದ್ರುದಾರನು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ನಾನು ಒಂದು ತಿಂಗಳ ಗರ್ಭಿಣಿ ಇದ್ದಾಗ ಎದ್ರುದಾರನು, ಅವರ ಮನೆಯವರು ಮಗು ಬೇಡ, ಮಗುವನ್ನು ತೆಗೆಸಿ ಬಿಡು ಎಂದು ನನಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ನಾನು ಗರ್ಭಿಣಿ ಇದ್ದಾಗ ಎದ್ರುದಾರನು ಮತ್ತು ಅವನ ಮನೆಯವರು ನನಗೆ ಊಟವನ್ನು ಕೊಡದೆ ಉಪವಾಸ ಇಡುತ್ತಿದ್ದರು. ನಂತರ ನಾನು 7 ತಿಂಗಳ ಗರ್ಭಿಣಿ ಇರುವಾಗ ಎದ್ರುದಾರರ ಕಿರುಕುಳ ತಾಳಲಾರದೇ ನನ್ನ ತಾಯಿಯ

ಮನೆಗೆ ಹೋಗಿರುತ್ತೇನೆ. ಮಗು ಹುಟ್ಟಿದ ನಂತರ ಮಗುವನ್ನು ನೋಡಲು ಎದ್ರುದಾರನು ಬಂದಿರುವುದಿಲ್ಲ. ಮಗುವಿನ ನಾಮಕರಣ ನನ್ನ ತಾಯಿಯ ಮನೆಯಲ್ಲಿಯೇ ಮಾಡಿರುತ್ತೇನೆ. ಎದ್ರುದಾರನು ಅವರ ಸಂಬಂಧಿಕರ ಜೊತೆ ಮಗು ಬೇಡ ಎಂದು ಹೇಳಿರುವ ವಿಚಾರವನ್ನು ಅವರ ಸಂಬಂಧಿಕರು ನಮ್ಮ ಮನೆಗೆ ಮಗುವನ್ನು ನೋಡಲು ಬಂದಾಗ ಹೇಳಿರುತ್ತಾರೆ.

ಮಗುವಿಗೆ ಒಂದು ವರ್ಷ ಆಗುವ ತನಕ ನಾನು ತಾಯಿ ಮನೆಯಲ್ಲಿ ಇದ್ದೆನು. ನಂತರ ಮಗುವಿಗೆ ಒಂದು ವರ್ಷ ಪೂರ್ಣಗೊಂಡ ನಂತರ ನನ್ನ ತಂದೆ ತಾಯಿ ಮತ್ತು ಇತರ ಹಿರಿಯರು ಸೇರಿಕೊಂಡು ನನ್ನನ್ನು ಮತ್ತು ಮಗುವನ್ನು ಎದ್ರುದಾರನ ಮನೆಯಾದ ಬೋರಳ್ಳಿ, ಚೆನ್ನಗಾರ, ಅಚವೆಗೆ ಬಿಟ್ಟು ಬಂದಿರುತ್ತಾರೆ. ಎದ್ರುದಾರನ ತಾಯಿ ಮತ್ತು ಅವರ ತಂಗಿಯಂದಿಯರು ಎದ್ರುದಾರನ ಮನೆಯಲ್ಲಿಯೇ ವಾಸ ಮಾಡಿಕೊಂಡು ಇದ್ದಾರೆ. ಎದ್ರುದಾರನು ಮಂಗಳೂರಿಗೆ ಕೆಲಸಕ್ಕೆ ಹೋಗಿ ಬಂದು ಮಾಡುತ್ತಿದ್ದರು. ಎದ್ರುದಾರನ ಮನೆಯಲ್ಲಿ ನನಗೆ ಮತ್ತು ನನ್ನ ಮಗುವಿಗೆ ಹೊಟ್ಟೆಗೆ ಊಟ ಕೊಡದೇ ಉಪವಾಸ ಇಡುತ್ತಿದ್ದರು. ಎದ್ರುದಾರನು ಅವನ ತಾಯಿ ಮತ್ತು ತಂಗಿಯಂದಿರ ಮಾತನ್ನು ಕೇಳಿ ನನಗೆ ಹೀಯಾಳಿಸುವುದು, ಸಂಶಯದಿಂದ ನೋಡಿ ಹೊಡೆಯುತ್ತಿದ್ದರು. ನಂತರ ನನ್ನನ್ನು ಮತ್ತು ನನ್ನ ಮಗುವನ್ನು ಎದ್ರುದಾರನು ಮಂಗಳೂರಿನಲ್ಲಿರುವ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ಮಗುವಿಗೆ 3 ವರ್ಷ ಆದಾಗ ಮಗುವಿಗೆ ಶಾಲೆಗೆ ಸೇರಿಸಲು ಕೇಳಿಕೊಂಡಾಗ ಎದ್ರುದಾರನು ಶಾಲೆಗೆ ಪ್ರವೇಶ ಮಾಡಿಸಿರುವುದಿಲ್ಲ. ಮಂಗಳೂರಿನಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಕ್ರಿಶ್ಚಿಯನ್ ಮನೆಯವರು ನನಗೆ ಊಟ ನೀಡುತ್ತಿದ್ದರು. 2016 ನೇ ಸಾಲಿನಲ್ಲಿ ಎದ್ರುದಾರನ ತಮ್ಮ ಎದ್ರುದಾರನನ್ನು ಮತ್ತು ನನ್ನನ್ನು ಮತ್ತು ನನ್ನ ಮಗುವನ್ನು ಅಂಕೋಲಾದ ಮನೆಗೆ ಕರೆದುಕೊಂಡು ಬಂದಿರುತ್ತಾನೆ. ಎದ್ರುದಾರನು ಮತ್ತು ಅವನ ಮನೆಯವರು ಕಿರುಕುಳ ಕೊಡುತ್ತಿದ್ದರು. ಮಗುವನ್ನು ಶಾಲೆಗೆ ದಾಖಲು

ಮಾಡಿಸಿರುವುದಿಲ್ಲ. 2016 ರಲ್ಲಿ ನನ್ನನ್ನು ಎದ್ರುದಾರನು ಮತ್ತು ಅವನ ಮನೆಯವರು ಸೇರಿಕೊಂಡು ಮಹಿಳಾ ಸಾಂತ್ವನ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಒಂದು ದಾಖಲೆಗೆ ಸಹಿ ಮಾಡುವಂತೆ ಹೇಳಿದ್ದು, ನಾನು ಸಹಿ ಮಾಡಿರುವುದಿಲ್ಲ. 2016 ರ ಕೊನೆಯ ವಾರದಂದು ಎದ್ರುದಾರನು ನನಗೆ ಹೊಡೆದ ಕಾರಣ ನಾನು ಅಂಕೋಲಾ ಪೊಲೀಸ್ ಠಾಣೆಯಲ್ಲಿ ಅವನ ವಿರುದ್ಧ ದೂರನ್ನು ನೀಡಿರುತ್ತೇನೆ. ಸದರಿ ಪ್ರಕರಣ ಸಂಖ್ಯೆ ಸಿ.ಸಿ. 421/17 ದಾಖಲಾಗಿದ್ದು, ವಿಚಾರಣಾ ಹಂತದಲ್ಲಿ ಇದೆ.

ಎದ್ರುದಾರನು ನನಗೆ ಹೊಡೆದಿದ್ದು, ನಾನು ಕುಮಟಾ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಸರಕಾಗಿ ಆಸ್ಪತ್ರೆ ಮಂಗಳೂರಿನಲ್ಲಿ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ತಾಲೂಕ ಕಾನೂನು ಸೇವಾ ಸಮಿತಿಗೆ ಜೀವನಾಂಶದ ಬಗ್ಗೆ ಅರ್ಜಿ ಸಲ್ಲಿಸಿದ್ದು, ಸದ್ರಿ ಅರ್ಜಿ ಸಂಖ್ಯೆ ಪಿ ಎಲ್ ಸಿ 07/2017 ರಲ್ಲಿ ರೂ. 1000/- ಜೀವಾನಾಂಶ ಆದೇಶವಾಗಿರುತ್ತದೆ. ಎದ್ರುದಾರನ ಸದ್ರಿ ಹಣವನ್ನು ನೀಡಿರುವುದಿಲ್ಲ. ಎದ್ರುದಾರನಿಗೆ ಅಂಕೋಲಾದಲ್ಲಿ ಜಮೀನು ಮತ್ತು ಅಡಿಕೆ ತೋಟ ಇದ್ದು, ಸುಮಾರು 5 ಲಕ್ಷದ ವರೆಗೆ ಆದಾಯ ಇರುತ್ತದೆ. ಎದ್ರುದಾರನು ಅರಣ್ಯ ಗುತ್ತಿಗೆ ಮಾಡುತ್ತಿದ್ದು, 5 ಲಕ್ಷದ ವರೆಗೆ ಆದಾಯ ಇರುತ್ತದೆ. ನನಗೆ ಯಾವುದೇ ಆದಾಯ ಇಲ್ಲದೇ ಇರುವುದರಿಂದ ಜೀವನ ನಡೆಸಲು ಕಷ್ಟವಾಗುತ್ತಿದ್ದು, ನನಗೆ ರೂ. 10 ಸಾವಿರವನ್ನು ಜೀವನಾಂಶವಾಗಿ ನೀಡಬೇಕಾಗಿ ಕೇಳಿರುತ್ತೇನೆ.

**(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ